ಸಿರಿವಂತನನ್ನು ಎಂದಿನಿಂದಲೂ ಕಾಡುತ್ತಿತ್ತು. ಕವಿ ಹೃದಯದ ವಾಸವದತ್ತೆಯನ್ನು ಮನಃಪೂರ್ವಕವಾಗಿ ತನ್ನವಳನ್ನಾಗಿಸಿಕೊಳ್ಳುವ ಧಾವಂತದ ಓಟದದಲ್ಲಿ ಕುದುರೆಯ ಖುರಪುಟದ ಶಬ್ದವು ಭೂಮಿ ಮೇಲಿನ ಎಲ್ಲ ಪ್ರೇಮಿಗಳ ಎದೆಮಿಡಿತದಂತೆ ಕೇಳಿಸುತಿತ್ತು!

★★★

ಹೀಗೆ ಜಂಗಮವೂ ಮಹಾ ಕಿಲಾಡಿಯೂ ಪ್ರೇಮವು ಎಲ್ಲರ ಹೃದಯದಲ್ಲಿ ವಿರಹದ ಸ್ಥಾವರವನ್ನು ನೆಡುತ್ತಾ ವಿಜಯಶೇಖರ ಮಹಾರಾಜನ ಅಖಂಡ ರಾಜ್ಯವನ್ನು ಆಕ್ರಮಿಸುತ್ತಿರಲು...

**ಕಿರಿಯ ರಾಣಿ ಮತ್ತು ಸೇನಾಪತಿ ನೆರೆದ ಒಡ್ಡೋಲಗದಲ್ಲಿ ಕಣ್ಣುಗಳಲ್ಲೆ ಪ್ರೇಮ ನಿವೇದಿಸಿಕೊಳ್ಳುತ್ತಾ ಅದೆಷ್ಟು ಮೈಮರೆತಿದ್ದರೆಂದರೆ ಆ ಕಾವ್ಯಸಾಲುಗಳು ತಮ್ಮ ಕೈಯಿಂದ ಸೋರಿಕೆಯಾದವು ಎನ್ನುವುದು ಅವರ ಗ್ರಹಿಕೆಗೇ ಬರಲಿಲ್ಲ!**

ವಿಜಯಶೇಖರ ಮಹಾರಾಜನ ಆಸ್ಥಾನಕ್ಕೆ ಮಹಾಕಾವ್ಯಗಳನ್ನು ಬರೆದು ವಿಶ್ವವಿಖ್ಯಾತನಾದ ಗಾಂಧಾರ ದೇಶದ ನವಿಲೇಂದು ಭೂಷಣ ಮಹಾಕವಿಯ ಆಗಮನವಾಯಿತು. ಕಿರಿಯ ರಾಣಿಯ ಪ್ರಸನ್ನತೆಗಾಗಿ ಕಾವ್ಯಪ್ರೇಮಿಯೆನಿಸಿದ್ದ ವಿಜಯಶೇಖರ ಮಹಾರಾಜನು ಭೂಷಣ ಮಹಾಕವಿಯನ್ನು ಸಕಲ ರಾಜಮರ್ಯಾದೆಯೊಂದಿಗೆ ಬರಮಾಡಿಕೊಂಡನು. ಅರಮನೆಯಲ್ಲಿ ಎಲ್ಲೆಲ್ಲೂ ಕಾವ್ಯೋತ್ಸವ! ಕಾವ್ಯ ಕನ್ನಿಕೆ ಅರಮನೆಯ ಆವರಣದಿಂದಾಚೆ ಹೆಜ್ಜೆಯಿಟ್ಟು ರಾಜಬೀದಿಯನ್ನೂ ದಾಟಿ ಮಹಾಜನಗಳನ್ನೂ ಸಾಮಾನ್ಯ ಪ್ರಜೆಗಳನ್ನೂ ಪುಲಕಿತಗೊಳಿಸಿದಳು. ಕಿರಿಯ ರಾಣಿಗಂತೂ ಈ ಕಾವ್ಯಗಬ್ಬದಲ್ಲಿ ಆಗಾಗ ಸೇನಾಪತಿಯ ದರ್ಶನವೂ ಸಾಧ್ಯವಾದದ್ದರಿಂದ ಪ್ರೇಮೋತ್ಸವದ ಸಂಭ್ರಮವೆಂಬಂತೆ ಮಿಂದೆದ್ದಳು. ಕಾವ್ಯದ ಉನ್ಮಾದ ಪ್ರೇಮದ ನಿನಾದ ಅವಳಲ್ಲಿ ನವಚೇತನ ತುಂಬಿತು! ಸಂತೋಷದಲ್ಲಿರುವಾಗ ಕಿರಿಯ ರಾಣಿ ತ್ರಿಪುರ ಸುಂದರಿಯಂತೆ ಕಂಗೊಳಿಸುವ ಪರಿಯನ್ನು ಕಂಡು ಮಹಾರಾಜನು ಸಂಪ್ರೀತನಾಗಿ ನವಿಲೇಂದು ಭೂಷಣ ಮಹಾಕವಿಯ ಉಪಸ್ಥಿತಿಯಲ್ಲಿ ಮಹಾಕಾವ್ಯ ಸಮ್ಮೇಳನವನ್ನು ಜರುಗಿಸಲು ಆದೇಶಿಸಿದನು. ಮಹಾ ಮಹಾ ಕಾವ್ಯಪರಿಣತಮತಿಗಳನ್ನು ಮಹಾ ಮಹಾ ಪಂಡಿತೋತ್ತಮರನ್ನೂ ಕವಿರತ್ನರನ್ನೂ ಸಭೆಗೆ ಆಹ್ವಾನಿಸಿದನು. ಅದೊಂದು ಮುಕ್ತ ಸಮ್ಮೇಳನವಾದ್ದರಿಂದ ಸಾಮಾನ್ಯ ಪ್ರಜೆಗಳೂ ಭಾಗವಹಿಸಲು ಅವಕಾಶ ಕೊಟ್ಟಿದ್ದನು. ಜನರು ಯಃಕಶ್ಚಿತ್ ಕಾವ್ಯದ ತುಣುಕಿಗೆ ಅಮಲೇರಿಸಿಕೊಳ್ಳುವುದನ್ನು ಗ್ರಹಿಸಿದ್ದ ಮಹಾಮಂತ್ರಿಯು ಅವರು ತಮ್ಮ ಬಡತನ, ಬರಗಾಲ, ವ್ಯಾಪಾರ, ದುಃಖಗಳನ್ನು ಹೀಗೇ ಮರೆಯುತ್ತಿರಲಿ ಎಂಬ ಚಾಣಾಕ್ಷತನದಿಂದ ಸಮ್ಮೇಳನವನ್ನು ಅದ್ದೂರಿಯಾಗಿಸುವಲ್ಲಿ ಮಹಾಮಂತ್ರಿಯು ಮಹಾರಾಜನಿಗೆ ಮನಸಾ ಸಾಥ್ ನೀಡಿದನು.

ಇಡೀ ರಾಜ್ಯವೇ ಸಮ್ಮೇಳನದ ಸಂಭ್ರಮದಲ್ಲಿರುವಾಗ ಕವಿ ಮಧುರಮತಿಯು ಮಾತ್ರ ತನ್ನ ಗುಡಿಸಲ ಮುಂದೆ ಮಣ್ಣಿನ ಮಡಕೆ ಮಾಡಿಕೊಂಡು ಇರುವುದು ಅವನ ಧರ್ಮಪತ್ನಿಗೆ